# ಕರ್ನಾಟಕ ಉಚ್ಚ ನ್ಯಾಯಾಲಯ

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

## ದಿನೇಶ್ ಹಾಗೂ ಮತ್ತೊಬ್ಬರು ವಿರುದ್ಧ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಠಾಣಾಧಿಕಾರಿ, ಚಳಕೆರೆ ಪೊಲೀಸ್ ಠಾಣೆ, ಮೈಸೂರು

ಕ್ರಿಮಿನಲ್ ಅಪೀಲು ಸಂಖ್ಯೆ: 1988/2018, ದಿನಾಂಕ 7 ನೇ ಆಗಸ್ಟ್, 2019

## ತೀರ್ಪು

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

ವಿಶೇಷ ಮೊಕದ್ದಮೆಸಂಖ್ಯೆ: 85/2018, ದಿನಾಂಕ 12/15.10.2018 ರಲ್ಲಿ II ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಧೀಶ, ಮೈಸೂರು ಇವರು ಹೊರಡಿಸಿದ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ತೀರ್ಪು ಮತ್ತು ಆದೇಶದಿಂದ ಬಾಧಿತರಾದ 1 ನೇ ಮತ್ತು 2 ನೇ ಆರೋಪಿಗಳು ಪ್ರಸ್ತುತ ಅಪೀಲನ್ನು ಹೂಡಿರುವರು.

2. ಅಪೀಲುದಾರರಾದ 1 ನೇ ಮತ್ತು 2 ನೇ ಆರೋಪಿಗಳ ಪರ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತ್ಯರ್ಜಿದಾರ-ಸರ್ಕಾರದ ಪರ ಮಾನ್ಯ ಹೆಚ್ಸಿಜಿಪಿಯವರ ವಾದಗಳನ್ನು ನಾನು ಆಲಿಸಿದ್ದೇನೆ.

3. ದೂರಿನ ಸಾರಾಂಶವು ಹೀಗಿದೆ, ದಿನಾಂಕ 06.04.2016 ಮತ್ತು 07.04.2016 ರ ಮಧ್ಯರಾತ್ರಿ ನೋಂದಣಿ ಸಂ. ಕೆಎ-45-8889 ಹೊಂದಿರುವ ಟಿಪ್ಪರ್ ಲಾರಿಯ ಚಾಲಕನಾದ 1 ನೇ ಆರೋಪಿ ಮತ್ತು ಮಾಲೀಕನಾದ 2 ನೇ ಆರೋಪಿ ಚೋಳೇನಹಳ್ಳಿ ಗ್ರಾಮದ ಹತ್ತಿರ ಲಕ್ಷ್ಮಣ ತೀರ್ಥ ನದಿಯಿಂದ 5.50 ಕ್ಯೂಬಿಕ್ ಮೀಟರ್ನಷ್ಟು ಮರಳನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿರುವಾಗ, ಸದರಿ ಟಿಪ್ಪರ್ ಲಾರಿಯನ್ನು ತಡೆದು ನಿಲ್ಲಿಸಿ ತಪಾಸಣೆ ನಡೆಸಿದಾಗ ಆರೋಪಿತ ವ್ಯಕ್ತಿಗಳು ಯಾವುದೇ ಸರಿಯಾದ ವಿವರಣೆಗಳನ್ನು ನೀಡಿರುವುದಿಲ್ಲ ಮತ್ತು ಸದರಿ ಲಾರಿಯನ್ನು ಮಹಜರು ಮಾಡಿ, ಜಪ್ತಿಮಾಡಿ, ದೂರನ್ನು ನೋಂದಾಯಿಸಲಾಗಿದೆ.ತನಿಖೆ ಪೂರ್ಣಗೊಂಡ ನಂತರ, ಆರೋಪ ಪಟ್ಟಿಯನ್ನು ದಾಖಲಿಸಲಾಗಿದೆ.ತದನಂತರದಲ್ಲಿ ಅದನ್ನು ವಿಶೇಷ ನ್ಯಾಯಾಲಯ ಸಂಜ್ಞಾನಕ್ಕೆ ತಂದುಕೊಂಡಿದೆ ಮತ್ತು ಆರೋಪಿಗಳು ಇದ್ದುದನ್ನು ದೃಢಪಡಿಸಿದೆ.ಉಭಯ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಆರೋಪಗಳನ್ನು ರೂಪಿಸಲಾಯಿತು.ಆರೋಪಿಗಳು ತಾವು ತಪ್ಪಿತಸ್ಥರಲ್ಲವೆಂದು ವಾದಿಸಿ, ವಿಚಾರಣೆಗೊಳಪಡಲು ಕ್ಲೇಮು ಮಾಡಿಕೊಂಡಿದ್ದರಿಂದ, ಅದರಂತೆಯೇ ವಿಚಾರಣೆಗಾಗಿ ಮೊಕದ್ದಮೆಯನ್ನು ನಿಗದಿಪಡಿಸಲಾಯಿತು.

4. ಪ್ರಾಸಿಕ್ಯೂಷನ್ ತನ್ನ ಮೊಕದ್ದಮೆಯನ್ನು ರುಜುವಾತು ಪಡಿಸುವ ಸಲುವಾಗಿ, ಪ್ರಾ.ಸಾ.ಗಳಾದ 1 ರಿಂದ 7 ರಂತೆ ಏಳು ಜನ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ, 15 ದಸ್ತಾವೇಜುಗಳನ್ನು ನಿಶಾನೆ ಪಿ .1 ರಿಂದ ಪಿ .15 ಎಂದು ಗುರುತು ಮಾಡಿರುವರು.ತದನಂತರದಲ್ಲಿ ಆರೋಪಿಗಳ ಹೇಳಿಕೆಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿಕೊಳ್ಳಲಾಯಿತು ಹಾಗೂ ಆರೋಪಿಗಳು ಯಾವುದೇ ಪ್ರತಿವಾದಿ ಸಾಕ್ಷ್ಯಗಳನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ..ಉಭಯ ಪಕ್ಷಕಾರ ವಾದಗಳನ್ನು ಆಲಿಸಿದ ತರುವಾಯ, ಅಪರಾಧ ನಿರ್ಣಯದ ಪ್ರಶ್ನಿತ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ಹೊರಡಿಸಲಾಗಿದೆ.ಈ ನ್ಯಾಯಾಲಯದ ಮುಂದೆ ಅಪೀಲುದಾರರಾದ 1 ನೇ ಮತ್ತು 2 ನೇ ಆರೋಪಿಗಳು ಪ್ರಶ್ನೆತ ತೀರ್ಪು ಮತ್ತು ಆದೇಶದ ಕಾನೂನುಸಮ್ಮತತೆಯನ್ನು ಮತ್ತು ಅದರ ಸರಿತನವನ್ನು ಪ್ರಶ್ನಿಸಿರುವರು.

5. ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮದ (ಸಂಕ್ಷಿಪ್ತವಾಗಿ ' ಎಂಎಂಡಿಆರ್ ಅಧಿನಿಯಮ) 4 (1), 4 (1ಎ) ಪ್ರಕರಣವನ್ನು ಒದಿಕೊಳ್ಳುವುದರೊಂದಿಗೆ 21 ನೇ ಪ್ರಕರಣದ ಅಡಿಯಲ್ಲಿ ಮತ್ತು ಕರ್ನಾಟಕ ಉಪ ಖನಿಜಗಳ ರಿಯಾಯಿತಿ ನಿಯಮಗಳು, 1994 (ಸಂಕ್ಷಿಪ್ತವಾಗಿ ನಿಯಮಗಳು) ರ 42 ನೇ ಮತ್ತು 44 ನೇ ನಿಯಮಗಳ ಅಡಿಯಲ್ಲಿ ಹಾಗೂ ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಅಡಿಯಲ್ಲಿನ ದ ಂ ಡನೀಯ ಅಪರಾಧಗಳಿಗಾಗಿ ಪೊಲೀಸ್ ಸಬ್-ಇನ್ಸ್ಪೆಕ್ಟರ್ ನಿಶಾನೆ ಪಿ .8 ರ ಪ್ರಕಾರ ದೂರು ದಾಖಲಿಸಿರುತ್ತಾರೆಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದನೆ ಮಾಡಿಕೊಂಡಿರುತ್ತಾರೆ.

6. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಮಾಡಿದ ನಿವೇದನೆಗಳಲ್ಲಿ, ಎಂಎಂಡಿಆರ್ ಅಧಿನಿಯಮದ 22 ನೇ ಪ್ರಕರಣದ ಪ್ರಕಾರ ಸಂಜ್ಞಾನತೆಗೆ ತೆಗೆದುಕೊಳ್ಳುವ ಸಲುವಾಗಿ ಅಧಿಕೃತ ವ್ಯಕ್ತಿಯು ದೂರನ್ನು ದಾಖಲಿಸಬೇಕಾಗುತ್ತದೆ ಮತ್ತು ಹಾಗೆ ದೂರನ್ನು ದಾಖಲಿಸದಿದ್ದರೆ, ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಿ ದಂಡನೀಯ ಅಪರಾಧದ ಸಂಜ್ಞಾನತೆಯನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳುವಂತಿಲ್ಲ.ಸದರಿ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಅಧಿವಿಚಾರಣಾ ನ್ಯಾಯಾಲಯವು ಎಂಎಂಡಿಆರ್ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಆರೋಪಿಗಳು ಅಪೀಲುದಾರರನ್ನು ತಪ್ಪಾಗಿ ನ್ಯಾಯನಿರ್ಣಿತ ಅಪರಾಧಿಗಳೆಂದು ನಿರ್ಣಯಿಸಿದೆ ಎಂದು ನಿವೇದಿಸಿರುವರು.ತಮ್ಮ ನಿವೇದನೆಯನ್ನು ಮುಂದುವರೆಸಿ 1, 3 ರಿಂದ 5 ರವರೆಗಿನ ಪ್ರಾ.ಸಾ.ಗಳು ಜಪ್ತಿ ಮಹಜರಿನ ಪಂಚರಾಗಿದ್ದು, ಇವರೆಲ್ಲರೂ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸಿರುವುದಿಲ್ಲ ಮತ್ತು ಅವರೆಲ್ಲರನ್ನು ಪ್ರತಿಕೂಲ ಸಾಕ್ಷ್ಯಗಳೆಂದು ಪರಿಗಣಿಸಲಾಗಿದೆ.

ಈ ನ್ಯಾಯಾಲಯದ ಮುಂದೆ ಲಭ್ಯವಿರುವ ಏಕ ಮಾತ್ರ ಸಾಕ್ಷ್ಯವೆಂದರೆ 6 ಮತ್ತು 7 ನೇ ಪ್ರಾ.ಸಾ.ಗಳಾಗಿದ್ದು, ಇವರುಗಳು ಅಧಿಕೃತ ಸಾಕ್ಷಿದಾರರಾಗಿರುವರು ಮತ್ತು ಈ ಸಾಕ್ಷಿಗಳು ಮರಳು ಕಳ್ಳತನ ಮಾಡಿದ ಸ್ವತ್ತಾಗಿದೆ ಎಂಬ ಸಂಗತಿಯನ್ನು ರುಜುವಾತುಪಡಿಸುವುದಕ್ಕೆ ಇಚ್ಛೆಯುಳ್ಳವರು.ಸದರಿ ಸಾಕ್ಷ್ಯಾಧಾರಗಳ ಗೈರುಹಾಜರಿಯಲ್ಲಿ ಆರೋಪಿಗಳನ್ನು ಭಾರತ ದಂಡ ಸಂಹಿತೆಯ 379 ನೇ ಪ್ರಕರಣ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ನ್ಯಾಯನಿರ್ಣಿತ ಅಪರಾಧಿಗಳೆಂದು ನಿರ್ಣಯಿಸಲು ಸಾಧ್ಯವಿಲ್ಲ ಎಂಬುದು ಅವರ ನಿವೇದನೆಯಾಗಿದೆ.ಮುಂದುವರೆಸುತ್ತಾ, ಅಧಿವಿಚಾರಣಾ ನ್ಯಾಯಾಲಯವು, ಈ ಅಂಶದ ಮೇಲಿನ ಕಾನೂನನ್ನು ಪರಿಗಣಿಸದೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಧಾರವನ್ನು ಯುಕ್ತವಾಗಿ ವಿವೇಚನೆಗೆ ಒಳಪಡಿಸದೆ, ತಪ್ಪಾದ ನ್ಯಾಯನಿರ್ಣಯಕ್ಕೆ ಬಂದು ಆರೋಪಿಗಳಿಗೆ ತಪ್ಪಾಗಿ ಶಿಕ್ಷೆ ವಿಧಿಸಲಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಈ ಎಲ್ಲಾ ಕಾರಣಗಳ ಮೇಲೆ, ಮಾನ್ಯ ನ್ಯಾಯವಾದಿಗಳು, ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ವಜಾಗೊಳಿಸುವ ಮೂಲಕ ಅಪೀಲನ್ನು ಪುರಸ್ಕರಿಸುವುದಕ್ಕೆ ಮತ್ತು ಆರೋಪಿಯನ್ನು ಖುಲಾಸೆಗೊಳಿಸುವಂತೆ ಪ್ರಾರ್ಥಿಸಿರುವರು.

7. ಮೇಲಿನ ವಾದಗಳಿಗೆ ವಿರುದ್ಧವಾಗಿ, ಮಾನ್ಯ ಹೆಚ್‌ಸಿಜಿಪಿಯವರು, 1 ನೇ ಮತ್ತು 2 ನೇ ಆರೋಪಿಗಳು ಟಿಪ್ಪರ್ ಲಾರಿಯಲ್ಲಿ ಮರಳನ್ನು ಸಾಗಣೆಮಾಡುವ ಕೃತ್ಯ ನಡೆಸುತ್ತಿರುವಾಗಲೇ ಸಿಕ್ಕಿಬಿದ್ದಿದ್ದಾರೆ ಎಂದು ಬಲವಾಗಿ ವಾದಿಸಿದ್ದಾರೆ.ತಮ್ಮ ನಿವೇದನೆಯನ್ನು ಮುಂದುವರೆಸಿ, ಲಾರಿಯಲ್ಲಿ ಮರಳನ್ನು ತುಂಬಿಸಲಾಗಿತ್ತು ಎಂಬ ವಿಷಯದಲ್ಲಿ ಯಾವುದೇ ವಿವಾದಾಂಶವು ಕಂಡುಬಂದಿಲ್ಲ ಮತ್ತು ಸದರಿ ಸಂಗತಿಯನ್ನು 2, 6 ಮತ್ತು 7 ನೇ ಪ್ರಾ.ಸಾ.ಗಳು ಸಹ ಸಮರ್ಥಿಸಿರುವರು.ನಿಶಾನೆ ಪಿ .2 ರಿಂದ ಪಿ .5 ರಲ್ಲಿ ಹಾಜರುಪಡಿಸಿರುವ ಛಾಯಚಿತ್ರಗಳೂ ಸಹ 2 ನೇ ಮತ್ತು 7 ನೇ ಪ್ರಾ.ಸಾ.ಗಳು ಸಾಕ್ಷ್ಯವನ್ನು ಸಮರ್ಥಿಸುತ್ತವೆ ಎಂದು ನಿವೇದಿಸಿರುವರು.ಅಲ್ಲದೆ ನ್ಯಾಯವಾದಿಗಳು ಇಂತಹ ಸನ್ನಿವೇಶಗಳ ಅಡಿಯಲ್ಲಿ ಪ್ರಾಸಿಕ್ಯೂಷನ್ ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನು ಆರೋಪಿಸಿದಾಗ, ಅಂಥ ಸನ್ನಿವೇಶಗಳಲ್ಲಿ ಪೊಲೀಸರು ತನಿಖೆ ನಡೆಸಿ ಆರೋಪ ಪಟ್ಟಿಯನ್ನು ದಾಖಲಿಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವರು ಎಂದು ನಿವೇದಿಸಿರುವರು.ತದನುಸಾರವಾಗಿ ಆರೋಪ ಪಟ್ಟಿಯನ್ನು ದಾಖಲಿಸಲಾಗಿದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು, ಸದರಿ ಅಂಶವನ್ನು ಪರಿಗಣನೆಗೆ ತೆಗೆದುಕೊಂಡು, ಆರೋಪಿಗಳಿಗೆ ಅಪರಾಧಿಗಳೆಂದು ನಿರ್ಣಯಿಸಿರುವುದು ಸರಿಯಾಗಿದೆ.ಪ್ರಾಥಮಿಕ ಹಂತದಲ್ಲಿಯೇ ಸದರಿ ವಿವಾದಾಂಶವನ್ನು ಆರೋಪಿಗಳು ಎತ್ತದಿರುವುದರಿಂದ, ಈ ಹಂತದಲ್ಲಿ ಸದರಿ ವಿವಾದಾಂಶವನ್ನು ಎತ್ತಲು ಸಾಧ್ಯವಿಲ್ಲ ಎಂದು ನಿವೇದಿಸಿರುವರು.ಮುಂದುವರೆದು, ಆರೋಪಿಯು, ಸಿಂಧುವಾದ ಪರವಾನಗಿಯೊಂದಿಗೆ ಮರಳನ್ನು ಸಾಗಾಣೆ ಮಾಡಲಾಗುತ್ತಿತ್ತು ಎಂದು ದೃಢಪಡಿಸಲು ಅವರು ಲೈಸೆನ್ಸ್ ಅನ್ನು ಹಾಜರುಪಡಿಸಿರುವುದಿಲ್ಲ.ಹೀಗಿರುವಾಗ, ಮರಳನ್ನು ಕಳವು ಮಾಡಿದ ಸ್ವತ್ತೆಂದು ರುಜುವಾತುಪಡಿಸುವುದಕ್ಕೆ ಪ್ರಯತ್ನಿಸಲಾಗುತ್ತಿದೆ ಮತ್ತು ಅಂತೆಯೇ ಆರೋಪಿಯನ್ನು, ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣಯಿಸಲು ಅರ್ಹನಾಗಿರುತ್ತಾನೆ ಎಂದು ನಿವೇದಿಸಿಕೊಳ್ಳುತ್ತಾ, ಈ ಎಲ್ಲಾ ಕಾರಣಗಳ ಮೇಲೆ, ಅಪೀಲನ್ನು ವಜಾಗೊಳಿಸಬೇಕೆಂದು ಅವರು ಪ್ರಾರ್ಥಿಸಿರುವರು.

8. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಾಡಿದ ಎಲ್ಲಾ ನಿವೇದನೆಗಳನ್ನು ಮತ್ತು ದಾಖಲೆಗಳನ್ನು ತುಂಬಾ ಜಾಗರೂಕತೆಯಿಂದ ಮತ್ತು ಕೂಲಂಕಷವಾಗಿ ನಾನು ಪರ್ಯಾಲೋಚಿಸಿರುತ್ತೇನೆ.

9. ಪ್ರಾಸಿಕ್ಯೂಷನ್, ತನ್ನ ಮೊಕದ್ದಮೆಯನ್ನು ರುಜುವಾತುಪಡಿಸುವ ಸಲುವಾಗಿ, ಏಳು ಸಾಕ್ಷಿದಾರರನ್ನು ವಿಚಾರಣೆ ಮಾಡಿದೆ.1 ಮತ್ತು 3 ನೇ ಪ್ರಾ.ಸಾ.ಗಳು, ದಿನಾಂಕ 07.04.2016 ರ ಮುಂಜಾನೆ ಸುಮಾರು 6 ಗಂಟೆಯ ಸುಮಾರಿಗೆ ಮರಳನ್ನು ತುಂಬಿಕೊಂಡು ಹೋಗುತ್ತಿದ್ದ ಟಿಪ್ಪರ್ ಲಾರಿಯನ್ನು ಜಪ್ತಿ ಮಾಡಿದಾಗ ಬರೆಸಲಾಗಿದ್ದ ನಿಶಾನೆ ಪಿ .1 ರಲ್ಲಿರುವ ಜಪ್ತಿ ಮಹಜರಿನ ಪಂಚರಾಗಿದ್ದಾರೆ.ಈ ಇಬ್ಬರು ಸಾಕ್ಷಿದಾರರನ್ನು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಸಿರುವುದಿಲ್ಲ ಮತ್ತು ಈ ಇಬ್ಬರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲಾಗಿದೆ.

ಮಾನ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ತಮ್ಮ ಪಾಟೀ-ಸವಾಲಿನ ಅವಧಿಯಲ್ಲೂ ಸಹ, ಪ್ರಾಸಿಕ್ಯೂಷನ್ ಮೊಕದ್ದಮೆಗೆ ಪುಷ್ಟಿಕೊಡುವಂತಹ ಅಂಥ ಯಾವುದೇ ಗಮನಾರ್ಹ ಅಂಶಗಳನ್ನು ಹೊರಗೆಡವಿರುವುದಿಲ್ಲ.4 ಮತ್ತು 5 ನೇ ಪ್ರಾ.ಸಾ.ದಾರರು, ನಿಶಾನೆ ಪಿ .7 ರಲ್ಲಿರುವ ಸ್ಥಳ ಮಹಜರಿನ ಅನುಪ್ರಮಾಣಿತ ಸಾಕ್ಷಿದಾರರಾಗಿರುವರು.ಇವರು ಸಹ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸಿರುವುದಿಲ್ಲ ಮತ್ತು ಇವರುಗಳನ್ನು ಸಹ ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಲಾಗಿದೆ.ಅವರುಗಳ ಪಾಟೀಸವಾಲಿನ ಅವಧಿಯಲ್ಲೂ, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಪುಷ್ಟಿಕರಿಸುವಂತಹ ಯಾವುದೇ ಗಮನಾರ್ಹ ಅಂಶಗಳನ್ನು ಹೊರಗೆಡವಲು ಸಾಧ್ಯವಾಗಿಲ್ಲ.ಈ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷಿಗಳೆಂದರೆ 2, 6 ಮತ್ತು 7 ನೇ ಪ್ರಾ.ಸಾ.ಗಳು ಮಾತ್ರವೇ.2 ನೇ ಪ್ರಾ.ಸಾ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿದ್ದಾರೆ.ಅವರುದಿನಾಂಕ: 03.05.2016 ರಂದು ದೂರುದಾರನ ಕೋರಿಕೆಯ ಮೇಲೆ, ಬಿಳಿಕೆರೆ ಪೊಲೀಸ್ ಠಾಣೆಗೆ ಹೋಗಿ, ನೋಂದಣಿ ಸಂ:ಕೆಎ-45-8889 ಅನ್ನು ಹೊಂದಿರುವ ಟಿಪ್ಪರ್ ಲಾರಿಯಲ್ಲಿರುವ ಮರಳಿನ ಪ್ರಮಾಣವನ್ನು ಲೆಕ್ಕಹಾಕಿದುದಾಗಿ ಮತ್ತು ಮರಳಿನ ಪ್ರಮಾಣವು 5.50 ಕ್ಯೂಬಿಕ್ ಮೀಟರ್ ಆಗಿತ್ತು ಎಂದು ಹೇಳಿಕೆ ನೀಡಿದ್ದಾರೆ ಮತ್ತು ಅವರು ನಿಶಾನೆ ಪಿ .6 ರಲ್ಲಿರುವಂತೆ ವರದಿಯನ್ನು ನೀಡಿರುತ್ತಾರೆ. 2 ನೇ ಪ್ರಾ.ಸಾ. ಪಾಟೀ-ಸವಾಲಿನ ಅವಧಿಯಲ್ಲೂ ಸಹ ಅವರ ಸಾಕ್ಷ್ಯವನ್ನು ನಿರಾಕರಿಸಲು ಯಾವುದೇ ಗಮನಾರ್ಹ ಅಂಶವನ್ನು ಹೊರಡಿಸಲಾಗಿಲ್ಲ.

10. 6 ನೇ ಪ್ರಾ.ಸಾ., ಹೆಡ್ ಕಾನ್ಸ್ಟೇಬಲ್ ಆಗಿದ್ದು, ಅವರು 7 ನೇ ಪ್ರಾ.ಸಾ. ನೀಡಿದ ಎಫ್ಐಆರ್ನ ಆಧಾರದ ಮೇಲೆ ವ್ಯವಹರಣೆಗಳನ್ನು ಪ್ರಾರಂಭಿಸಿದ ಮತ್ತು ಕ್ರಿಮಿನಲ್ ಸಂ .100/2016 ರಲ್ಲಿ ಮೊಕದ್ದಮೆಯನ್ನು ದಾಖಲಿಸಿ ಮತ್ತು D ಅಧಿಕಾರವ್ಯಾಪ್ತಿಯ ನ್ಯಾಯಾಲಯದಲ್ಲಿ ಎಫ್ಐಆರ್ ಅನ್ನು ಸಲ್ಲಿಸಿರುತ್ತಾರೆ.ಅವರು, ತನ್ನ ಸಾಕ್ಷದಲ್ಲಿ ನಿಶಾನೆ ಪಿ .9 ಮತ್ತು ಪಿ.] ಅನ್ನು ಹಾಜರುಪಡಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.ತನ್ನ ಪಾಟೀ ಸವಾಲಿನ ಸಂದರ್ಭದಲ್ಲಿ, ಅವರು ಸದರಿ ದೂರನ್ನುದಿನಾಂಕ: 06.04.2016 ಮತ್ತು 07.04.2016 ರ ಮಧ್ಯರಾತ್ರಿ 1 ಗಂಟೆಗೆ ದಾಖಲಿಸಲಾಗಿದೆ ಎಂದು ಹೇಳಿಕೆ ನೀಡಿರುತ್ತಾರೆ ಮತ್ತು ಆ ಮಧ್ಯರಾತ್ರಿ 1 ಗಂಟೆಯ ಸಂದರ್ಭದಲ್ಲಿ ಜಪ್ತಿ ಮಹಜರಾದ ನಿಶಾನೆ ಪಿ .1 ಕ್ಕೆ ಪ್ರಮಾಣೀಕರಿಸುವುದಕ್ಕೆ ನೆರೆಹೊರೆಯವರನ್ನು ಕೇಳಲು ತನಗೆ ಯಾವುದೇ ಅಡ್ಡಿಯಾಗಲಿಲ್ಲ ಎಂದು ಹೇಳಿರುವನು.7 ನೇ ಪ್ರಾ.ಸಾ. ದೂರುದಾರನಾಗಿದ್ದು, ಅವನು ತನ್ನ ಸಾಕ್ಷ್ಯದಲ್ಲಿ ತಾನು 06.04.2016 ಮತ್ತು 07.04.2016 ರ ರಾತ್ರಿ ಪಹರೆಯ ಕರ್ತವ್ಯ ನಿರ್ವಹಿಸುತ್ತಿದ್ದನೆಂದು ಹೇಳಿರುವನು.ಅವನು, ವಿಶ್ವಾಸಾರ್ಹ ಮಾಹಿತಿಯ ಮೇಲೆ, ಟಿಪ್ಪರ್ ಲಾರಿಯನ್ನು ತಡೆದು ನಿಲ್ಲಿಸಿ ಪ್ರಶ್ನಿಸಿದಾಗ, ಸದರಿ ವಾಹನದ ಚಾಲಕನು ಅದನ್ನು ನಿಲ್ಲಿಸಿ, ಕತ್ತಲೆಯಲ್ಲಿ ಓಡಿಹೋದನು.ಆಗ ಅವನು ತನ್ನ ಸಿಬ್ಬಂದಿಯನ್ನು ಕರೆದು ಸದರಿ ಲಾರಿಯನ್ನು ನಿಗಾವಣೆ ಮಾಡಲು ಪ್ರತಿನಿಯೋಜಿಸಿ, ಸುಮಾರು ರಾತ್ರಿ 12 ಗಂಟೆಯಲ್ಲಿ ಅವನು ಪೊಲೀಸ್ ಠಾಣೆಗೆ ಹಿಂದುರುಗಿ ದೂರನ್ನು ಬೆರಳಚ್ಚು ಮಾಡಿ, ಸದರಿ ದೂರನ್ನು ನಿಶಾನೆ ಪಿ .8 ರಲ್ಲಿರುವಂತೆ ದಾಖಲಿಸಿರುವುದಾಗಿ ಸಾಕ್ಷ್ಯ ಎಲಾ ನೀಡಿರುವನು.ಅವನು ತನ್ನ ಸಾಕ್ಷ್ಯವನ್ನು ಮುಂದುವರೆಸಿ, ತಾನು ಮೊಕದ್ದಮೆಯ ತನಿಖೆಯನ್ನು ಸಹ ಮಾಡಿದುದಾಗಿ ಮತ್ತು ದಸ್ತಾವೇಜುಗಳನ್ನು ಸಂಗ್ರಹಿಸಿದ ತರುವಾಯ, ಆರೋಪಿಗಳ ವಿರುದ್ಧ ಆರೋಪ ಪಟ್ಟಿಯನ್ನು ದಾಖಲಿಸಿರುವುದಾಗಿ ಸಾಕ್ಷ್ಯ ಎ ನೀಡಿರುವನು.ಪಾಟೀ-ಸವಾಲಿನ ಅವಧಿಯಲ್ಲಿ 7 ನೇ ಪ್ರಾ.ಸಾ. ಸಾಕ್ಷ್ಯವನ್ನು ನಿರಾಕರಿಸಲು ಯಾವುದೇ ಗಮನಾರ್ಹ ಅಂಶಗಳನ್ನು ಹೊರಗೆಡವಲಾಗಿಲ್ಲ.

11. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಎತ್ತಿರುವ ಮುಖ್ಯ ವಾದವೆಂದರೆ ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಪೊಲೀಸರು ತನಿಖೆ ಮಾಡುವುದಕ್ಕೆ ಮತ್ತು ವರದಿ ಸಲ್ಲಿಸುವುದಕ್ಕೆ ಎಂಎಂಡಿಆರ್ ಅಧಿನಿಯಮದ 22 ನೇ ಪ್ರಕರಣವು ಪ್ರತಿಷೇದಿಸಿದೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ ನಾನು ಇಲ್ಲಿ

ಎಂಎಂಆರ್ಡಿ ಬಿಎಂಆರ್ಡಿ ಅಧಿನಿಯಮದ 22 ನೇ ಪ್ರಕರಣವನ್ನು ಉಲ್ಲೇಖಿಸುತ್ತಿದ್ದೇನೆ, ಅದನ್ನು ಈ ಕೆಳಗಿನಂತೆ ಓದಿಕೊಳ್ಳುವುದು:

“22. ಅಪರಾಧಗಳ ಸಂಜ್ಞಾನ.-ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ನಿಯಮಗಳ ಅಡಿಯಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಪರವಾಗಿ ಪ್ರಾಧಿಕೃತವಾದ ವ್ಯಕ್ತಿಯು ಲಿಖಿತದಲ್ಲಿ ದೂರನ್ನು ದಾಖಲಿಸಿದ ಹೊರತು ಯಾವುದೇ ದಂಡನೀಯ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

12. ಮೇಲಿನ ಪ್ರಕರಣವನ್ನು ಸೂಕ್ಷ್ಮವಾಗಿ ಓದಿಕೊಂಡಾಗ, ಅದರಲ್ಲಿ ಎಂಎಂಆರ್ಡಿ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ದಂಡನೀಯ ಅಪರಾಧಗಳ ಅ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತನಾದ ವ್ಯಕ್ತಿಯು ದೂರನ್ನು ದಾಖಲಿಸಬೇಕಾಗಿರುವುದನ್ನು ಅದು ಸ್ಪಷ್ಟಪಡಿಸುತ್ತದೆ.ಅಧಿಸೂಚನೆಸಂಖ್ಯೆ: ಸಿಐ 21 ಎಂಎಂಎನ್ ( 2) 2014, ಬೆಂಗಳೂರು,ದಿನಾಂಕ: 21.01.2014 ರ ಮೂಲಕ, ಪೊಲೀಸ್ ಇನ್ಸ್ಪೆಕ್ಟರ್ ಮತ್ತು ಸಬ್-ಇನ್ಸ್ಪೆಕ್ಟರ್ ಅವರುಗಳು ತಮ್ಮ ಪದನಾಮದಿಂದಲೇ ಅಧಿಕೃತ ಅಧಿಕಾರಿಗಳೆಂದು ಪ್ರಮಾಣಿಸಿರುವುದರಲ್ಲಿ ಯಾವುದೇ ಸಂಶಯ ಇರುವುದಿಲ್ಲ.ಆದರೆ, ಎಂಎಂಡಿಆರ್ ಅಧಿನಿಯಮದ 22 ನೇ ಪ್ರಕರಣವನ್ನು ಜಾಗೂರೂಕತೆಯಿಂದ ಓದಿದಾಗ, ಈ ಸಂಬಂಧದಲ್ಲಿ ಅಧಿಕೃತನಾದ ವ್ಯಕ್ತಿಯು ಲಿಖಿತದಲ್ಲಿ ದೂರನ್ನು ದಾಖಲಿಸಿದ ಹೊರತು, ಯಾವುದೇ ನ್ಯಾಯಾಲಯವು ಎಂಎಂಡಿಆರ್ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮಗಳ ಅಡಿಯಲ್ಲಿ ಯಾವುದೇ ದಂಡನೀಯ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲವೆಂದು ಸ್ಪಷ್ಟಪಡಿಸುತ್ತದೆ.

13. “ದೂರು” ಎಂಬ ಪದವನ್ನು ದಂಡ ಪ್ರಕ್ರಿಯಾ ಸಂಹಿತೆಯ 2 (ಡಿ) ಪ್ರಕರಣದಲ್ಲಿ ಪರಿಭಾಷಿಸಲಾಗಿದೆ.ಅದು ಈ ಕೆಳಗಿನಂತೆ ಓದಿಕೊಳ್ಳುವುದು:

2. ಪರಿಭಾಷೆ.ಈ ಸಂಹಿತೆಯಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, (ಎ) (ಬಿ) (ಸಿ) (ಡಿ)” ಫಿರ್ಯಾದು” ಎಂದರೆ, ಯಾರೇ ಜ್ಞಾತ ಅಥವಾ ಅಜ್ಞಾತ ವ್ಯಕ್ತಿಯು ಒಂದು ಅಪರಾಧವೆಸಗಿದ್ದಾನೆಂದು ಮ್ಯಾಜಿಸ್ಟ್ರೇ ಟನಿಗೆ I ಮೌಖಿಕವಾಗಿ ಅಥವಾ ಬರಹದಲ್ಲಿ, ಈ ಸಂಹಿತೆಯ ಮೇರೆಗೆ ಆ ಮ್ಯಾಜಿಸ್ಟ್ರೇಟನು ಕ್ರಮ ಕೈಗೊಳ್ಳಬೇಕೆಂದು ಉದ್ದೇಶಿಸಿ, ಮಾಡಲಾದ ಯಾವುದೇ ಆಪಾದನೆ.ಆದರೆ ಅದು ಪೊಲೀಸು ವರದಿಯನ್ನು ಒಳಗೊಳ್ಳುವುದಿಲ್ಲ.”

14. ಸದರಿ ಪ್ರಕರಣವನ್ನು ಸೂಕ್ಷ್ಮವಾಗಿ ಓದಿಕೊಂಡಾಗ, “ ಫಿರ್ಯಾದು ೨೨ ಎಂದರೆ, ಒಬ್ಬ ಮ್ಯಾಜಿಸ್ಟ್ರೇಟರಿಗೆ ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಾಡಿದ ಯಾವುದೇ ಆರೋಪವೆಂದು ಅರ್ಥ. ಒಪ್ಪಿಕೊಂಡಿರುವಂತೆ ಪ್ರಸ್ತುತ ಮೊಕದ್ದಮೆಯಲ್ಲಿ ಆಪಾದಿತ ವ್ಯಕ್ತಿಗಳು ಸದರಿ ಟಿಪ್ಪರ್ ಲಾರಿಯಲ್ಲಿ ಅಕ್ರಮವಾಗಿ ಮರಳನ್ನು ಸಾಗಣೆ ಮಾಡುತ್ತಿದ್ದರೆಂಬ ಮಟ್ಟಿಗೆ ಮ್ಯಾಜಿಸ್ಟ್ರೇಟರ ಮುಂದೆ ಅಂಥ ಯಾವುದೆ ಖಾಸಗಿ “ C ಫಿರ್ಯಾದು ” ದಾಖಲಿತವಾಗಿರುವುದಿಲ್ಲ.ವರದಿಯಾಗಿರುವ ಶ್ರೀ ವಿವೇಕ್ ಮತ್ತು ಮತ್ತೊಬ್ಬರು –ವಿರುದ್ಧ ಕರ್ನಾಟಕ ಸರ್ಕಾರ, ಕುಣಿಗಲ್ ಪೊಲೀಸ್ ಠಾಣೆ ಮತ್ತು ಮತ್ತೊಬ್ಬರು ' ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು, ಮ್ಯಾಜಿಸ್ಟ್ರೇಟರು ಮತ್ತು ವಿಶೇಷ ನ್ಯಾಯಾಲಯಗಳು ಗಮನದಲ್ಲಿಟ್ಟುಕೊಳ್ಳಬೇಕಾಗಿರುವ ಕೆಲವು ಮಾರ್ಗಸೂಚಿಗಳನ್ನು ನೀಡಿದೆ.ಸದರಿ ನಿರ್ಣಯದ 37 ನೇ ಪ್ಯಾರಾಗ್ರಾಫ್ನಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

“37. ಪುನರಾವರ್ತನೆಯಾದರೂ ಸಹ, ಮುಕ್ತಾಯಗೊಳಿಸುವುದಕ್ಕೆ ಮೊದಲು ನಾನು, ಪೊಲೀಸರು, ಮ್ಯಾಜಿಸ್ಟ್ರೇಟರುಗಳು ಮತ್ತು ವಿಶೇಷ ನ್ಯಾಯಾಲಯಗಳು ಗಮನದಲ್ಲಿಟ್ಟಿಕೊಳ್ಳಬೇಕಾದ ಮಾರ್ಗಸೂಚಿಗಳನ್ನು ಸಂಕ್ಷಿಪ್ತಗೊಳಿಸುವುದು ಯುಕ್ತ ಮತ್ತು ನ್ಯಾಯೋಚಿತವೆಂದು ಭಾವಿಸಿದ್ದೇನೆ ಮತ್ತು ಅದನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ನಮೂದಿಸಲಾಗಿದೆ.

ಮಾರ್ಗಸೂಚಿಗಳು:

(1) ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಿ ರಚಿತವಾದ ವಿಶೇಷ ನ್ಯಾಯಾಲಯ, ಅಧಿಕಾರವ್ಯಾಪ್ತಿಯ ಮ್ಯಾಜಿಸ್ಟ್ರೇಟರು ಒಪ್ಪಿಸಿದ ಮೊಕದ್ದಮೆಯ ಹೊರತಾಗಿ ಯಾವುದೇ ಇತರ ದಂಡನೀಯ ಅಪರಾಧಗಳೊಂದಿಗೆ ಎಂಎಂಡಿಆರ್ ಅಧಿನಿಯಮ ಮತ್ತು ಕೆಎಂಎಂಸಿ ನಿಯಮಗಳ ಅಡಿಯಲ್ಲಿ ಅಪರಾಧಗಳನ್ನು ನೇರವಾಗಿ ಸಂಜ್ಞಾನಕ್ಕೆ ತೆಗೆದುಕೊಳ್ಳುವ ಅಧಿಕಾರವ್ಯಾಪ್ತಿಯನ್ನು ಹೊಂದಿಲ್ಲ, ವಿಶೇಷ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಪೊಲೀಸರಿಂದ ಅಂತಿಮ ವರದಿ ಸ್ವೀಕರಿಸುವುದಕ್ಕೆ ಅಥವಾ ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಿ ಅಧಿಕೃತ ಅಧಿಕಾರಿಯಿಂದ ನೇರವಾಗಿ ಯಾವುದೇ ಖಾಸಗೀ ದೂರನ್ನು ಸ್ವೀಕರಿಸುವುದಕ್ಕೆ ಮತ್ತು ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಾಗಲೀ ಅಥವಾ ಯಾವುದೇ ಇತರ ದಂಡನೀಯ ಕಾನೂನುಗಳ ಅಡಿಯಲ್ಲಾಗಲೀ ಅಪರಾಧಗಳನ್ನು ಸ ಂ ಜ್ಞಾನಕ್ಕೆ ತೆಗೆದುಕೊಳ್ಳುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.ಅಂಥ ಯಾವುದೇ ದೂರನ್ನು ತಪ್ಪಾಗಿ ಸ್ವೀಕರಿಸಿದ್ದು ಅದು ಇತ್ಯರ್ಥದಲ್ಲಿದ್ದ ಪಕ್ಷದಲ್ಲಿ, ವಿಶೇಷ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 201 ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದಂತೆ ಕಾರ್ಯ ವಿಧಾನವನ್ನು ಅನುಸರಿಸಬೇಕು ಮತ್ತು ಆ ಆ ಮಟ್ಟಿಗೆ ಹಿಂಬರಹದೊಂದಿಗೆ ಸಮುಚಿತ ನ್ಯಾಯಾಲಯಕ್ಕೆ ಮಂಡಿಸುವ ಸಲುವಾಗಿ ದೂರನ್ನು ಹಿಂದಕ್ಕೆ ನೀಡಬೇಕು.ಅದೇ ರೀತಿಯಲ್ಲಿ, ಯಾವುದೇ ಪೊಲೀಸ್ ವರದಿ ಸ್ವೀಕರಿಸಿದ್ದ ಪಕ್ಷದಲ್ಲಿ, ಸೂಕ್ತ ಕ್ರಮಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 228 (1) (ಎ) ಪ್ರಕರಣದ ಅಡಿಯಲ್ಲಿ ಉಪಬಂಧಗಳನ್ನು ಅನ್ವಯಿಸಿ ಅಧಿಕಾರವ್ಯಾಪ್ತಿಯ ಮ್ಯಾಜಿಸ್ಟ್ರೇಟರಿಗೆ ಅದನ್ನು ವರ್ಗಾಯಿಸಬೇಕಾಗುತ್ತದೆ.

(2) ಎಂಎಂಡಿಆರ್ ಅಧಿನಿಯಮ ಮತ್ತು ಕೆಎಂಎಂಸಿ ನಿಯಮಗಳ ಅಡಿಯಲ್ಲಿನ ಅಪರಾಧಗಳಿಗಾಗಿ ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಅಂತಿಮ ವರದಿಯನ್ನು ಪೊಲೀಸರು ಅಧಿಕಾರವ್ಯಾಪ್ತಿ ಹೊಂದಿರುವ ಜೆಎಂಎಫ್ಸಿ ನ್ಯಾಯಾಲಯಕ್ಕಾಗಲೀ ಅಥವಾ ವಿಶೇಷ ನ್ಯಾಯಾಲಯಕ್ಕಾಗಲೀ ಸಲ್ಲಿಸಬಾರದು.ಆದಾಗ್ಯೂ, ಭಾರತ ದಂಡ ಸಂಹಿತೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ದಂಡನೀಯ ಕಾನೂನುಗಳ ಅಡಿಯಲ್ಲಿನ ಅಪರಾಧಕ್ಕಾಗಿ ಅಂತಿಮ ವರದಿಯನ್ನು ಪೊಲೀಸರು ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರ ಮುಂದೆ ಸಲ್ಲಿಸಬಹುದು.

(3) ಅಧಿಕಾರವ್ಯಾಪ್ತಿ ಮ್ಯಾಜಿಸ್ಟ್ರೇಟರಿಗೆ, ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿನ ಯಾವುದೇ ಪೊಲೀಸ್ ವರದಿಯ ಆಧಾರದ ಮೇಲೆ ಎಂಎಂಡಿಆರ್ ಅಧಿನಿಯಮ ಮತ್ತು ಕೆಎಂಎಂಸಿ ನಿಯಮಗಳ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಸಂಜ್ಞಾನಕ್ಕೆ ತೆಗೆದುಕೊಳ್ಳುವ ಅಧಿಕಾರವ್ಯಾಪ್ತಿ ಇರುವುದಿಲ್ಲ.ಆದಾಗ್ಯೂ, ಯಾವುದೇ ಇತರ ಕಾನೂನು ಪ್ರತಿಷೇದವು ಇಲ್ಲದಿದ್ದ ಪಕ್ಷದಲ್ಲಿ, ಭಾರತ ದಂಡ ಸಂಹಿತೆ ಅಡಿಯಲ್ಲಿನ ಯಾವುದೇ ದಂಡನೀಯ ಉಪಬಂಧಗಳ ಅಥವಾ ಯಾವುದೇ ಇತರ ದಂಡನೀಯ ಕಾನೂನುಗಳ ಅಡಿಯಲ್ಲಿ, ಪೊಲೀಸರ ಅಂತಿಮ ವರದಿಯು ಲಭ್ಯವಾದರೆ, ಮ್ಯಾಜಿಸ್ಟ್ರೇಟರು ಎಂಎಂಡಿಆರ್ ಅಧಿನಿಯಮದ ಮತ್ತು ಕೆಎಂಎಂಸಿ ನಿಯಮಗಳ ಅಡಿಯಲ್ಲಿನ ಅಪರಾಧಗಳನ್ನು ಹೊರತುಪಡಿಸಿ, ಭಾರತ ದಂಡ ಸಂಹಿತೆಯ ಅಡಿಯಲ್ಲಿ ಅಥವಾ ಅವರಿಗೆ ಅಧಿಕಾರ ನೀಡಲಾಗಿರುವ ಇತರ ಯಾವುದೇ ದಂಡನೀಯ ಕಾನೂನುಗಳ ಅಡಿಯಲ್ಲಿ ಅಂಥ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(4) ಎಂಎಂಡಿಆರ್ ಅಧಿನಿಯಮ ಮತ್ತು ಕೆಎಂಎಂಸಿ ನಿಯಮಗಳ ಅಡಿಯಲ್ಲಿ ಮಾತ್ರ ಖಾಸಗೀ ದೂರನ್ನು ಸಲ್ಲಿಸಲು ಉದ್ದೇಶಿಸಲಾಗಿದೆ ಮತ್ತು ಹಾಗಾಗಿ ಎಂಎಂಡಿಆರ್ ಅಧಿನಿಯಮ ಮತ್ತು ಕೆಎಂಎಂಸಿ ನಿಯಮಗಳ ಅಡಿಯಲ್ಲಿ ಸಕ್ಷಮ ಅಧಿಕೃತ ಅಧಿಕಾರಿಯು ಅಧಿನಿಯಮದ 22 ನೇ ಪ್ರಕರಣ ಅಡಿಯಲ್ಲಿ ದೂರನ್ನು ದಾಖಲಿಸಬೇಕಾಗಿರುತ್ತದೆ.ಯಾವುದೇ ಇತರ ದಂಡನೀಯ ಕಾನೂನುಗಳ ಅಡಿಯಲ್ಲಿ ಇತರ ಅಪರಾಧಗಳನ್ನು ಎಂಎಂಡಿಆರ್ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿನ ಅಪರಾಧಗಳೊಂದಿಗೆ ಸೇರಿಸಿದಾಗಲೂ ಸಹ ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರು, ಅಧಿಕೃತ ಅಧಿಕಾರಿಯು ಇತರ ದಂಡನೀಯ ಕಾನೂನುಗಳನ್ನು ಅನ್ವಯಿಸಿದ್ದಾಗ್ಯೂ ಖಾಸಗೀ ದೂರಿನ ಆಧಾರದ ಮೇಲೆಯೇ ಎಂಎಂಡಿಆರ್ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿನ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಸುಸ ಂ ಗತ ಉಪಬ ಂ ಧಗಳ ಪಾಲನೆಯ ನಂತರದಲ್ಲಿ ಮಾತ್ರವೇ, ಮ್ಯಾಜಿಸ್ಟ್ರೇಟರು ಇಡೀ ಮೊಕದ್ದಮೆಯನ್ನು ವಿಚಾರಣೆಗಾಗಿ ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು.

(5) ಅಧಿಕಾರವ್ಯಾಪ್ತಿ ಮ್ಯಾಜಿಸ್ಟ್ರೇಟರು ಅಧಿವಿಚಾರಣೆಗಾಗಿ ವಿಶೇಷ ನ್ಯಾಯಾಲಯಕ್ಕೆ ಪ್ರಕರಣವನ್ನು ಒಪ್ಪಿಸಿದ ನಂತರದಲ್ಲಿ ಮಾತ್ರವೇ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ದಂಡನೀಯ ಕಾನೂನುಗಳ ಅಡಿಯಲ್ಲಿನ ಯಾವುದೇ ಇತರೆ ಅಪರಾಧಗಳೂ ಸೇರಿದಂತೆ ಎಂಎಂಡಿಆರ್ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿತವಾದ ಕೆಎಂಎಂಸಿ ನಿಯಮಗಳ ಅಡಿಯಲ್ಲಿ ಅಪರಾಧಗಳನ್ನು ಅಧಿವಿಚಾರಣೆ ಮಾಡುವುದಕ್ಕೆ ವಿಶೇಷ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತದೆ.

(6) ಎಂಎಂಡಿಆರ್ ಅಧಿನಿಯಮದ 22 ನೇ ಪ್ರಕರಣದ ಅಡಿಯಲ್ಲಿ ಅಧಿಕೃತ ಅಧಿಕಾರಿಯು ಖಾಸಗೀ ದೂರು ದಾಖಲಿಸಿದ ಪಕ್ಷದಲ್ಲಿ ಮತ್ತು ಅದನ್ನು ಮ್ಯಾಜಿಸ್ಟ್ರೇಟರು ಸಂಜ್ಞಾನಕ್ಕೆ ತೆಗೆದುಕೊಂಡಲ್ಲಿ ಮತ್ತು ಖಾಸಗಿ ದೂರಿನ ವಿಚಾರಣೆ ಅಥವಾ ಅಧಿವಿಚಾರಣೆಯ ಅವಧಿಯಲ್ಲಿ ಅದೇ ಮೊಕದ್ದಮೆಯಲ್ಲಿ ಪೊಲೀಸರು ನಡೆಸುವ ತನಿಖೆಯು, ಮ್ಯಾಜಿಸ್ಟ್ರೇಟರು ನಡೆಸುವ ವಿಚಾರಣೆ ಅಥವಾ ಅಧಿವಿಚಾರಣೆಯ ವಸ್ತು ವಿಷಯವಾಗಿರುವ ಅಪರಾಧಕ್ಕೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿದೆಯೆಂದು ಮ್ಯಾಜಿಸ್ಟ್ರೇ ಟರಿಗೆ ತಿಳಿದುಬಂದರೆ, ಮ್ಯಾಜಿಸ್ಟ್ರೇಟರು ಅಂಥ ತನಿಖೆಯ ಅಥವಾ ಅಧಿವಿಚಾರಣೆ ವ್ಯವಹರಣೆಗಳನ್ನು ತಡೆಹಿಡಿದು ಪೊಲೀಸರಿ ಂ ದ ವಿಷಯದ ಮೇಲೆ ವರದಿಯನ್ನು ಕೇಳಬೇಕಾಗುತ್ತದೆ ಮತ್ತು ನಂತರದಲ್ಲಿ ಎರಡೂ ಮೊಕದ್ದಮೆಗಳನ್ನು ಅಧಿವಿಚಾರಣೆಗಾಗಿ ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು.

(7) ಪೊಲೀಸರು ಎಂಎಂಡಿಆರ್ ಅಧಿನಿಯಮ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆ ಮೋಟಾರು ವಾಹನಗಳ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ದಂಡನೀಯ ಕಾನೂನುಗಳ ಅಡಿಯಲ್ಲಿನ ಅಪರಾಧಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಈಗಾಗಲೇ ಅಂತಿಮ ವರದಿಯನ್ನು ದಾಖಲಿಸಿದ್ದ ಪಕ್ಷದಲ್ಲಿ, ಮ್ಯಾಜಿಸ್ಟ್ರೇಟರು, ಅದೇ ಘಟನೆಯಿಂದ ಆದ ಎಂಎಂಡಿಆರ್ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿನ ಅಪರಾಧಗಳಿಗಾಗಿ ಅಧಿಕೃತ ಅಧಿ ಕಾರಿಯು ಸದರಿ ಅಧಿನಿಯಮದ 22 ನೇ ಪ್ರಕರಣದಲ್ಲಿರುವಂತೆ ಯಾವುದೇ ಖಾಸಗೀ ದೂರು ದಾಖಲಿಸಿದ್ದರೆ ಅಂಥ ಮೊಕದ್ದಮೆಯ ತನಿಖೆ ಅಥವಾ ಅಧಿವಿಚಾರಣೆಯ ಅವಧಿಯಲ್ಲಿ, ಇತರ ದಂಡನೀಯ ಕಾನೂನುಗಳ ಅಡಿಯಲ್ಲಿ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಂಡಿದ್ದಲ್ಲಿ, ಮ್ಯಾಜಿಸ್ಟ್ರೇಟರು ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ತಡೆನೀಡತಕ್ಕದ್ದು.ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 202 ( 2) ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿತವಾದಂತಹ ಕಾರ್ಯವಿಧಾನವನ್ನು ಪಾಲಿಸಿದ ನಂತರ ದಂಡ ಪ್ರಕ್ರಿಯಾ ಸಂಹಿತೆಯ 323 ನೇ ಪ್ರಕರಣದ ಪ್ರಕಾರ ಎರಡು ಮೊಕದ್ದಮೆಗಳ ಅಧಿವಿಚಾರಣೆಗಾಗಿ ಅವುಗಳನ್ನು ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು.

(8) ವಿಶೇಷ ನ್ಯಾಯಾಲಯವು, ಒಂದೇ ಸ ಂ ಗತಿಗೆ ಸಂಬಂಧಿಸಿದ 6 ಮತ್ತು 7 ನೇ ಮಾರ್ಗಸೂಚಿಗಳಲ್ಲಿ ಹೇಳಲಾದಂತಹ ಮೊಕದ್ದಮೆಗಳನ್ನು ಸ್ವೀಕರಿಸಿದ ಮೇಲೆ, ಎಂಎಂಡಿಆರ್ ಅಧಿನಿಯಮದ 30 ಸಿ ಪ್ರಕರಣದ ಪ್ರಕಾರ ವಿಹಿತಗೊಳಿಸಿದ ಅಧಿಕಾರಗಳ ಹಿನ್ನೆಲೆಯಲ್ಲಿ ಸತ್ರ ಅಧಿವಿಚಾರಣೆಯ ಪ್ರಕ್ರಿಯೆಯನ್ನು ಅಳವಡಿಸಿಕೊಂಡು ಕಾನೂನಿಗೆ ಅನುಸಾರವಾಗಿ ಸಂದರ್ಭಾನುಸಾರ ಎರಡು ಮೊಕದ್ದಮೆಗಳನ್ನು ಒಟ್ಟಿಗೆ ಅಧಿವಿಚಾರಣೆ ಮಾಡಬೇಕಾಗುತ್ತದೆ.

(9) ಜಾಮೀನಿನ ಸಂಬಂಧದಲ್ಲಿ ಮತ್ತು ಜಪ್ತಿ ಮಾಡಲಾದ ಸ್ವತ್ತುಗಳನ್ನು ಮಧ್ಯಂತರ ಅಭಿರಕ್ಷೆಮಾಡುವ ಸಂಬಂಧದಲ್ಲಿ ಮ್ಯಾಜಿಸ್ಟ್ರೇಟರಿಗೆ ಪ್ರದತ್ತಗೊಳಿಸಲಾದ ಉಪಬಂಧಗಳು ಮತ್ತು ಅಧಿಕಾರಗಳನ್ನು, ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸುವವರೆಗೂ ವಿಚಾರಣೆಯ ಅವಧಿಯಲ್ಲಿ ಮ್ಯಾಜಿಸ್ಟ್ರೇಟರು ಚಲಾಯಿಸಬಹುದು.

(10) ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವಾದ ವಿಶೇಷ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಉಪಬಂಧಿಸಲಾದಂತೆ ಮೊಕದ್ದಮೆಯಲ್ಲಿ ಒಳಗೊಂಡ ಜಾಮೀನು ಮತ್ತು ಸ್ವತ್ತುಗಳ ವಿಲೇವಾರಿಗೆ ಸಂಬಂಧಿಸಿದಂತೆ ಸತ್ರ ನ್ಯಾಯಾಲಯ ಹೊಂದಿರುವಂತಹ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು."

15. ಪ್ರಸ್ತುತ ಮೊಕದ್ದಮೆಯನ್ನು ಚರ್ಚೆ ಮಾಡುವುದಕ್ಕೆ ಮೊದಲು, ಉಪ ಖನಿಜವಾದ ಮರಳು ಒಳಗೊಂಡಂತೆ ಖನಿಜಗಳ ಅಕ್ರಮ ಗಣಿಗಾರಿಕೆ, ಅಕ್ರಮ ಸಾಗಣಿಕೆ ಮತ್ತು ದಾಸ್ತಾನಿನ ವಿಷಯದಲ್ಲಿ ಎಂಎಂಡಿಆರ್

ಅಧಿನಿಯಮದಲ್ಲಿ ವಿಧಿಸಿರುವ ನಿಬಂಧದ ಉದ್ದೇಶವು ಜೀವ ಪರಿಸರ ವಿಜ್ಞಾನದ ವ್ಯವಸ್ಥೆಗೆ ಹಾನಿಯುಂಟು ಮಾಡುತ್ತದೆ ಎಂಬುದಾಗಿದೆ ಎಂಬುದರ ಅರಿವು ನನಗಿದೆ.ಇದು ಜೈವಿಕ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮವನ್ನು ಉಂಟು ಮಾಡುತ್ತದೆ.ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬ ನಾಗರಿಕನ ಮತ್ತು ನ್ಯಾಯಾಲಯದ ಕರ್ತವ್ಯವಾಗಿದೆ.ಪರಿಸರವನ್ನು ನ್ಯಾಯಾಲಯವೇ ಸಂರಕ್ಷಣೆ ಮಾಡಲು ಸಾಧ್ಯವಾಗದಿದ್ದರೆ, ಇನ್ನಾರೂ ಅದನ್ನು ಮಾಡಲು ಸಾಧ್ಯವಿಲ್ಲ.ಮೇಲಿನ ಚರ್ಚೆಯಲ್ಲಿ ಮಂಡಿಸಲಾದ ವಸ್ತುವಿಷಯವನ್ನು ಗಮನದಲ್ಲಿಟ್ಟುಕೊಂಡು, ಈ ಮೊಕದ್ದಮೆಯಲ್ಲಿ 7 ನೇ ಪ್ರಾ.ಸಾ. ಪೊಲೀಸ್ ಸಬ್-ಇನ್ಸಪೆಕ್ಟರ್ಗೆ ದೂರನ್ನು ಸಲ್ಲಿಸಿರುತ್ತಾನೆ ಮತ್ತು ಸದರಿ ದೂರಿನ  ಆಧಾರದ ಮೇಲೆ ಮೊಕದ್ದಮೆಯನ್ನು ತನಿಖೆ ಮಾಡಲಾಗಿದೆ ಮತ್ತು ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ದಾಖಲಿಸಲಾಗಿದೆ.ತನಿಖಾಧಿಕಾರಿಯು ಅಳವಡಿಸಿಕೊಂಡ ಪ್ರಕ್ರಿಯೆಯು ಎಂಎಂಡಿಆರ್ ಅಧಿನಿಯಮದ 22 ನೇ ಪ್ರಕರಣದೊಂದಿಗೆ ಉದ್ದೇಶಿತವಾಗಿರುವುದಿಲ್ಲ.ಎಂಎಂಡಿಆರ್ ಅಧಿನಿಯಮವು, ಈ ಸಂಬಂಧದಲ್ಲಿ ಅಧಿಕೃತನಾದ ವ್ಯಕ್ತಿಯು ಲಿಖಿತ ದೂರನ್ನು ಸಲ್ಲಿಸಿದ ಹೊರತಾಗಿ ಎಂಎಂಡಿಆರ್ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಯಾವುದೇ ದಂಡನೀಯ ಅಪರಾಧವನ್ನು ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳುವುದನ್ನು ನಿರ್ಬಂಧಿಸುತ್ತದೆ.ದೂರಿನ ಆಧಾರದ ಮೇಲೆ ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಿ ಅಪರಾಧ ಎಸಗಿದಕ್ಕಾಗಿ ವ್ಯವಹರಣೆಗಳನ್ನು ಪ್ರಾರಂಭಿಸಿರುವುದು ಕಾನೂನು ಬಾಹಿರವಾಗಿದೆ ಮತ್ತು ಸ ಂ ಜ್ಞಾನಕ್ಕೆ ತೆಗೆದುಕೊಂಡಿರುವುದು ಸರಿಯಾದ ಕ್ರಮವಾಗಿಲ್ಲ.ಸದರಿ ಕಾರ್ಯವಿಧಾನಗಳನ್ನು ಯುಕ್ತವಾಗಿ ಪಾಲಿಸದಿರುವಾಗ, ಅಂತಹ ಸಂದರ್ಭಗಳಲ್ಲಿ, ಇಡೀ ಪ್ರಕ್ರಿಯೆಯು ದೋಷಪೂರಿತವಾಗಿದೆ ಮತ್ತು ಮಾನ್ಯ ವಿಶೇಷ ನ್ಯಾಯಾಲಯವು ಎಂಎಂಡಿಆರ್ ಅಧಿನಿಯಮದ 4 (1), 4 ( 1ಎ) ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಹೊರಡಿಸಿದ ಅಪರಾಧ ನಿರ್ಣಯವು ಸರಿಯಲ್ಲ ಮತ್ತು ಅದು ಕಾನೂನು ಬಾಹಿರವಾಗಿದೆ.ಆ ಹಿನ್ನೆಲೆಯಲ್ಲಿ ಅಧಿವಿಚಾರಣಾ ನ್ಯಾಯಾಲಯದ ಈ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವುದು ಅಗತ್ಯವಿದೆ.

16. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಟರ್, ತಮ್ಮ ವಾದಾಂಶದಲ್ಲಿ, ಭಾರತ ದಂಡ ಸಂಹಿತೆಯ 173 ನೇ ಪ್ರಕರಣದ ಪ್ರಕಾರ ಸದರಿ ಸಂಹಿತೆಯ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಸಂಜ್ಞಾನಕ್ಕೆ ತೆಗೆದುಕೊಳ್ಳುವ ಅಧಿಕಾರ ಪೊಲೀಸ್ ಇನ್ಸ್ಪೆಕ್ಟರ್ಗೆ ಇದೆ ಮತ್ತು ತದನುಸಾರವಾಗಿ ಅವರು ಮೊಕದ್ದಮೆಯ ತನಿಖೆ ನಡೆಸಿ ಆರೋಪ ಪಟ್ಟಿಯನ್ನು ದಾಖಲಿಸಿದ್ದಾರೆಂದು ವಾದಿಸಿರುತ್ತಾರೆ.ಎಂಎಂಡಿಆರ್ ಅಧಿನಿಯಮ ಮತ್ತು ಭಾರತ ದಂಡ ಸಂಹಿತೆಯ ಅಡಿಯಲ್ಲಿ ದಂಡನೀಯ ಅಪರಾಧ ನಡುವಿನ ಭಿನ್ನತೆಗಳನ್ನು ಘನ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರ ರಾಜಧಾನಿ ಕ್ಷೇತ್ರವಾದ (ಎನ್ಸಿಟಿ) ದೆಹಲಿ ಸರ್ಕಾರ -ವಿರುದ್ಧ- ಸಂಜಯ್ ಮೊಕದ್ದಮೆಯಲ್ಲಿ ಸದರಿ ನಿರ್ಣಯದ 71 ಮತ್ತು 72 ನೇ ಪ್ಯಾರಾಗ್ರಾಫ್ನಲ್ಲಿ ಸವಿವರವಾಗಿ ಚರ್ಚಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತದೆ:

"71. ಹಾಗಾಗಿ, ದೂರಿನ ಆಧಾರದ ಮೇಲೆ ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಿ ಅಪರಾಧ ಎಸಗಿರುವುದಕ್ಕಾಗಿ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದೆ ಎಂಬ ಕಾರಣ ಮಾತ್ರದಿಂದಲೇ, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವ ಮೂಲಕ ಮೇಲೆ ನಮೂದಿಸಿದ ರೀತಿಯಲ್ಲಿ ಮರಳು ಮತ್ತು ಖನಿಜಗಳನ್ನು ಕಳವು ಮಾಡುವ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಅ ಂ ಥ ವ್ಯಕ್ತಿಗಳ ವಿರುದ್ಧ ಸ ಂ ಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕಾಗಿ ಮ್ಯಾಜಿಸ್ಟ್ರೇಟರ ಮುಂದೆ ವರದಿ ಸಲ್ಲಿಸುವುದಕ್ಕೂ ಪೊಲೀಸರನ್ನು ತಡೆಯಬಾರದು ಮತ್ತು ತಡೆಯತಕ್ಕದ್ದಲ್ಲ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸರ್ಕಾರದ ಜಮೀನಿನಿಂದ ಮರಳನ್ನು ಮತ್ತು ಜಲ್ಲಿಕಲ್ಲನ್ನು ಕಳುವು ಮಾಡಿದ ಸ ಂ ದರ್ಭದಲ್ಲಿ, ಪೊಲೀಸರು ಮೊಕದ್ದಮೆಯನ್ನು ದಾಖಲಿಸಿ, ಅದನ್ನು ತನಿಖೆ ನಡೆಸಿ ದಂಡ ಪ್ರಕ್ರಿಯಾ ಸ ಂ ಹಿತೆಯು 190 (1) (ಡಿ) ಪ್ರಕರಣದಲ್ಲಿ ಉಪಬಂಧಿಸಿದಂತೆ ಸಂಜ್ಞಾನಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸತಕ್ಕದ್ದು.

72. ಈ ವಿಷಯದಲ್ಲಿ ನಮ್ಮ ಪರಿಗಣಿ ತ ಆಲೋಚನೆಗಳನ್ನು ಗಮನಕ್ಕೆ ತಂದುಕೊಂಡ ನಂತರದಲ್ಲಿ, ಅಧಿನಿಯಮದ ಮತ್ತು ದಂಡ ಪ್ರಕ್ರಿಯಾ ಸಂಹಿತೆ ಮತ್ತು ಭಾರತ ದಂಡ ಸಂಹಿತೆಯ ಸುಸ ೦ ಗತ ಉಪಬಂಧಗಳ ಹಿನ್ನಲೆಯಲ್ಲಿ ನಾವು ಎಂಎಂಡಿಆರ್ ಅಧಿನಿಯಮದ ಅಡಿಯಲ್ಲಿ ಅಪರಾಧಕ್ಕೆ ಕಾರಣವಾಗುವ ವಸ್ತುಗಳನ್ನು ಮತ್ತು ಸರ್ಕಾರದ ಸ್ವತ್ತಾದ ನದಿಗಳ ದಂಡೆಯಿಂದ ಅನುಮತಿಯಿಲ್ಲದೆ, ಮರಳನ್ನು ಮತ್ತು ಜಲ್ಲಿಕಲ್ಲನ್ನು ಪ್ರಾಮಾಣಿಕವಾಗಿ, ತೆಗೆದಲ್ಲಿ ಅದು ಭಾರತ ದಂಡ ಸಂಹಿತೆಯ ಅಡಿಯಲ್ಲಿ ಸುಸ್ಪಷ್ಟವಾದ ಮೊಕದ್ದಮೆಯಾಗಿದೆ ಎಂಬ ಸ್ಪಷ್ಟ ನಿಲುವಿಗೆ ನಾನು ಬರುತ್ತೇನೆ.ಆದಾಗ್ಯೂ, ದಂಡ ಪ್ರಕ್ರಿಯಾ ಸಂಹಿತೆಯ 378 ನೇ ಪ್ರಕರಣದ ಅಡಿಯಲ್ಲಿನ ಅಪರಾಧವನ್ನು ಎಸಗಿದಕ್ಕಾಗಿ, ಪೊಲೀಸ್ ವರದಿಯನ್ನು ಸ್ವೀಕರಿಸಿದ ಮೇಲೆ, ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರು ಎಂಎಂಡಿಆರ್ ಅಧಿನಿಯಮದ ವಿವಿಧ ಉಪಬಂಧಗಳ ಉಲ್ಲಂಘನೆಯ ಸಂಬಂಧದಲ್ಲಿ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕಾಗಿ ದೂರು ಅಧಿಕೃತ ಅಧಿಕಾರಿಯಿಂದ ದಾಖಲಿತವಾಗಿದೆಯೇ ಎಂದು ನಿರೀಕ್ಷಿಸದೆ ಸದರಿ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳಬಹುದು.ತತ್ಪರಿಣಾಮವಾಗಿ, ವಿವಿಧ ಉಚ್ಚ ನ್ಯಾಯಾಲಯಗಳು ಚ ತೆಗೆದುಕೊಂಡ ತದ್ವಿರುದ್ಧ ಅಭಿಪ್ರಾಯಗಳನ್ನು ಕಾನೂನಿನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ ಮತ್ತು ಆದುದರಿ ೦ ದ ಅವುಗಳೆಲ್ಲವನ್ನು ತಳ್ಳಿಹಾಕಲಾಗಿದೆ.ತತ್ಪರಿಣಾಮವಾಗಿ ಸ ೦ ಬ ೦ ಧಪಟ್ಟ ಮ್ಯಾಜಿಸ್ಟ್ರೇಟರಿಗೆ ತದನುಸಾರವಾಗಿ ವ್ಯವಹರಣೆಗಳನ್ನು ನಡೆಸುವಂತೆ ನಿರ್ದೇಶಿಸಿ, ಈ ಕ್ರಿಮಿನಲ್ ಅಪೀಲುಗಳನ್ನು ವಿಲೇ ಮಾಡಲಾಗಿದೆ."

17. ಮೇಲಿನ ಪ್ಯಾರಾಗ್ರಾಫ್ಗಳನ್ನು ನಿಕಟವಾಗಿ ಓದಿದ ಮೇಲೆ, ಮರಳು ಮತ್ತು ಖನಿಜಗಳ ಕಳವು ಕೃತ್ಯ ಎಸಗಿದಕ್ಕಾಗಿ ಪೊಲೀಸರು ದಾಖಲಿಸಿದ ದೂರಿನ ಆಧಾರದ ಮೇಲೆ ಮ್ಯಾಜಿಸ್ಟ್ರೇಟರು ಸಂಜ್ಞಾನಕ್ಕೆ ತೆಗೆದುಕೊಂಡಿರುವುದು ಸಮರ್ಥನೀಯವಾಗಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ.ಆದಾಗ್ಯೂ, ಮರಳು ಮತ್ತು ಇತರ ಖನಿಜಗಳ ಕಳವಿಗಾಗಿ ದೂರು ದಾಖಲಾಗಿದ್ದ ಪಕ್ಷದಲ್ಲಿ ಮತ್ತು ತನಿಖೆಯ ನಂತರ ದಂಡ ಪ್ರಕ್ರಿಯಾ ಸಂಹಿತೆಯ 190 ( 1) (ಬಿ) ಪ್ರಕರಣದ ಪ್ರಕಾರ ಸಂಜ್ಞಾನಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರ ಮುಂದೆ ದಂಡ ಪ್ರಕ್ರಿಯಾ ಸಂಹಿತೆ 173 ನೇ ಪ್ರಕರಣದ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದ್ದರೆ, ಅದು ಸಮರ್ಥನೀಯವಾಗಿರುತ್ತದೆ.ಆದರೆ ಪ್ರಸ್ತುತ ಮೊಕದ್ದಮೆಯಲ್ಲಿ ಸದರಿ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕೆ ಅದರಲ್ಲೂ, ಎಂಎಂಡಿಆರ್ ಅಧಿನಿಯಮದೊಂದಿಗೆ ಅಪರಾಧವನ್ನು ಸೇರಿಸಿದಾಗ ಮ್ಯಾಜಿಸ್ಟ್ರೇಟರು ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.ಮ್ಯಾಜಿಸ್ಟ್ರೇಟರು, ಎಂಎಂಡಿಆರ್ ಅಧಿನಿಯಮದ ವಿವಿಧ ಉಪಬಂಧಗಳ ಉಲ್ಲಂಘನೆಯ ಸಂಬಂಧದಲ್ಲಿ ಸಂಜ್ಞಾನಕ್ಕೆ ತೆಗೆದುಕೊಳ್ಳುವುದಕ್ಕಾಗಿ ಅಧಿಕೃತ ಅಧಿಕಾರಿಯು ಮಾತ್ರವೇ ದಾಖಲಿಸಬಹುದಾದ ದೂರಿಗಾಗಿ ನಿರೀಕ್ಷಿಸದೆ, ಸದರಿ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳಬಹುದು.ಆದರೆ ಈ ಪ್ರಸ್ತುತ ಮೊಕದ್ದಮೆಯಲ್ಲಿ ಹಾಗೆ ಮಾಡಲಾಗಿಲ್ಲ ಎಂಬುದು ಸ್ಪಷ್ಟವಾಗಿದೆ.ಈ ಹಿನ್ನೆಲೆಯಲ್ಲಿ, ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಸಹ ಆಪಾದಿತನನ್ನು ದೋಷಾರೋಪಿಯನ್ನಾಗಿ ಮಾಡಿರುವುದರಿಂದ ಮತ್ತು ತನಿಖೆಯನ್ನು ನಡೆಸುವುದಕ್ಕೆ ತನಿಖಾಧಿಕಾರಿಯು ಅಧಿಕಾರವನ್ನು ಹೊಂದಿರುವರು ಎಂಬ ಮಾನ್ಯ ಹೆಚ್ಸಿಜಿಪಿಯವರು ಮಾಡಿದ ವಾದಾಂಶವು ಅಂಗೀಕಾರಾರ್ಹವಾಗಿಲ್ಲ.ಈ ಅಂಶಕ್ಕೆ ಯಾವುದೇ ಸಣ್ಣಪುಟ್ಟ ವ್ಯತ್ಯಾಸಗಳೇನಾದರೂ ಆಗಿದ್ದ ಪಕ್ಷದಲ್ಲಿ, ಭಾರತ ದಂಡ ಸಂಹಿತೆಯ 379 ನೇ ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧದ ಸಂಬಂಧದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಅವರು ತನಿಖೆ ನಡೆಸಿ ವರದಿ ಮಾಡಬಹುದೇ ಹೊರತು ಅದನ್ನು ಮೀರಿ ಮಾಡಬಾರದು.

18. ಅದು ಏನೇ ಇರಲಿ, ನಾನು, ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಸಾಕ್ಷ್ಯಗಳನ್ನು ತುಂಬಾ ಎಚ್ಚರಿಕೆ ಹಾಗೂ ಜಾಗೂರುಕತೆಯಿಂದ ಪರಿಶೀಲಿಸಿರುತ್ತೇನೆ.1, 3 ರಿಂದ 5 ನೇ ಪ್ರಾ.ಸಾ. ಜಪ್ತಿ ಮಹಜರಿನ ಸಾಕ್ಷ್ಯಾದಾರರಾಗಿದ್ದು, ಇವನ್ನಾರು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಮರ್ಥಿಸಿರುವುದಿಲ್ಲ ಮತ್ತು ಅವರೆಲ್ಲರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲಾಗಿದೆ.ಪ್ರಾಸಿಕ್ಯೂಷನ್ ಸಹ, ಆರೋಪಿಗಳು ಎಲ್ಲಿಂದ ಮರಳನ್ನು ಕಳವು ಮಾಡಿದರು?ಮತ್ತು ಮರಳು ರಾಜ್ಯಕ್ಕೆ ಸೇರಿದೆಯೇ ಅಥವಾ ಯಾರೇ ಇತರ ವ್ಯಕ್ತಿಗೆ ಸೇರಿದೆಯೇ ಮತ್ತು ಅದನ್ನು ಹೇಗೆ ಸಾಗಣೆ ಮಾಡುವ ಉದ್ದೇಶವನ್ನು ಆರೋಪಿಗಳು ಹೊಂದಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.ಅಭಿಲೇಖಗಳಿಂದ ಕಂಡುಬಂದಿರುವಂತೆ, 1ನೇ ಆರೋಪಿಯು ನೋಂದಣಿ ಸಂ. ಕೆಎ 45-8889 ಹೊಂದಿರುವ ಟಿಪ್ಪರ್ ಲಾರಿಯನ್ನು ಚಲಾಯಿಸುತ್ತಿದ್ದ ಎಂದು ಹೇಳಲಾಗಿದೆ.ಸದರಿ ವಾಹನವನ್ನು ತಡೆದು ನಿಲ್ಲಿಸಿದಾಗ, ಅವನು ಕತ್ತಲೆಯಲ್ಲಿ ಓಡಿಹೋದನು ಮತ್ತು 2 ನೇ

ಆರೋಪಿಯು ಹಾಜರಾಗಲಿಲ್ಲ.ಈ ಸಂಬಂಧದಲ್ಲಿ ಯಾವುದೇ ವಿವರಣೆಗಳು ಇರುವುದಿಲ್ಲ.ಇಂತಹ ಸನ್ನಿವೇಶದಲ್ಲಿ, ಮರಳನ್ನು ಕಳ್ಳತನ ಮಾಡಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ಅಂಶಗಳನ್ನು ಮಂಡಿಸಿಲ್ಲ.ಯಾವುದೇ ಅಂಥ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ, ಸದರಿ ಅಪರಾಧಕ್ಕಾಗಿ ಆರೋಪಿಯು ಅಪರಾಧಿಯೆಂದು ನಿರ್ಣಿತನಾಗಿರಲು ಅರ್ಹನಾಗಿಲ್ಲ.ಯಾವುದೇ ಆಯಾಮದಿಂದ ನೋಡಿದರೂ, ಅಧಿವಿಚಾರಣಾ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿ ಸಕ್ಷಮ ಮ್ಯಾಜಿಸ್ಟ್ರೇಟರ ಮುಂದೆ ಅಧಿಕೃತ ಅಧಿಕಾರಿಯೇ ಖಾಸಗಿ ದೂರನ್ನು ದಾಖಲಿಸಬೇಕಾಗುತ್ತದೆ ಮತ್ತು ನಂತರದಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ಪ್ರಕ್ರಿಯೆಯನ್ನು ಅನುಸರಿಸಬೇಕು ಮತ್ತು ತದನಂತರದಲ್ಲಿ ತನಿಖೆ ಪೂರ್ಣಗೊಳಿಸಿ ದೋಷಾರೋಪ ಪಟ್ಟಿಯನ್ನು ದಾಖಲಿಸಬೇಕಾಗುತ್ತದೆ ಎಂಬ ಕಾನೂನಿನ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ ಮತ್ತು ಸದರಿ ಪ್ರಕ್ರಿಯೆಯನ್ನು ಅನುಸರಿಸಿರುವುದಿಲ್ಲ ಹಾಗೆಯೇ ಈ ಸಂಬಂಧದಲ್ಲಿ ನಡೆಸಿದ ತನಿಖೆಯನ್ನೂ ಸಹ ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರದೆ ನಡೆಸಲಾಗಿದೆ.ಮೇಲಿನ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಗಮನಕ್ಕೆ ತೆಗೆದುಕೊಂಡು, ಅಪೀಲುದಾರರು ಪ್ರಶ್ನಿತ ಆದೇಶವನ್ನು ವಜಾಗೊಳಿಸುವಂತೆ ಕೋರಿರುತ್ತಾರೆ.ತದನುಸಾರವಾಗಿಯೇ, ಈ ಮುಂದಿನ ಆದೇಶವನ್ನು ಮಾಡಲಾಗಿದೆ:

II ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಧೀಶ, ಮೈಸೂರು ಇವರು ವಿಶೇಷ ಮೊಕದ್ದಮೆ ಸಂ:85/2018,ದಿನಾಂಕ: 12/15.10.2018 ರಲ್ಲಿ ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಆದೇಶವನ್ನು ವಜಾಗೊಳಿಸಲಾಗಿದೆ ಮತ್ತು 1 ಮತ್ತು 2 ನೇ ಆರೋಪಿಗಳು/ಅಪೀಲುದಾರರ ವಿರುದ್ಧ ಮಾಡಲಾದ ಆರೋಪಗಳಿಂದ ಅವರನ್ನು ಖುಲಾಸೆಗೊಳಿಸಲಾಗಿದೆ.

ಅಪೀಲುದಾರರು ಅಮಲ್ಜಾರಿಗೊಳಿಸಿದ ಜಾಮೀನು ಬಾಂಡುಗಳು ಮತ್ತು ಭದ್ರತಾ ಬಾಂಡುಗಳನ್ನು ಸಹ ಇಲ್ಲಿ ವಜಾಗೊಳಿಸಲಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ ಜಪ್ತಿ ಮಾಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾದ ನೋಂದಣಿ ಸಂ:ಕೆಎ-45-8889 ಹೊಂದಿರುವ ಟಿಪ್ಪರ್ ಲಾರಿಯನ್ನು, ರಾಜ್ಯವು ಯಾವುದೇ ಅಪೀಲನ್ನು ಹೂಡಿದರೆ, ಸದರಿ ಅಪೀಲು ವಿಲೆಯಾಗುವವರೆಗೂ, ಇದರಲ್ಲಿನ 2 ನೇ ಅಪೀಲುದಾರನು ಆ ಮಟ್ಟಿಗೆ ರಕ್ಷಣಾ ಬಾಂಡನ್ನು ಕಾರ್ಯಗತಗೊಳಿಸುವ ಮೂಲಕ ವಾಹನದ ಸ್ವರೂಪವನ್ನು ಮಾರ್ಪಡಿಸುವುದಾಗಲೀ, ಅಥವಾ ಪರಬಾರೆ ಮಾಡುವುದಾಗಲೀ ಮಾಡತಕ್ಕದ್ದಲ್ಲವೆಂಬ ಷರತ್ತಿನೊಂದಿಗೆ ಯುಕ್ತ ಗುರುತು ಮತ್ತು ಸ್ವೀಕೃತಿ ಬರಹದ ಆಧಾರದ ಮೇಲೆ ಸದರಿ 2 ನೇ ಅಪೀಲುದಾರ ಚೆಲುವಮೂರ್ತಿಯ ಪರವಾಗಿ ಈ ಮೂಲಕ ಬಿಡುಗಡೆಗೊಳಿಸಲು ಆದೇಶಿಸಲಾಗಿದೆ.

ತದನುಸಾರವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ.

ತತ್ಪರಿಣಾಮವಾಗಿ, ಐ.ಎ.ಸಂಖ್ಯೆ:1/2019 ಅನ್ನು ವಿಲೆಮಾಡಲಾಗಿದೆ.